ಹರಿಜನರಿಗೆ ಕೊಡುವ ಸೌಲಭ್ಯಗಳನ್ನು ಇವರಿಗೂ ವಿಸ್ತರಿಸಬೇಕೆಂದು ಮಾಡಿದ್ದೀರಿ. ಹರಿಜನರಿಗೆ ಯಾವ ರೀತಿ ರಸ್ತೆ, ವಿದ್ಯುತ್ ಹಾಗೂ ಇತರ ಸೌಲಭ್ಯಗಳನ್ನು ಕೊಡುವಾಗ ಆದ್ಯತೆ ಕೊಡ ಬೇಕೆಂದು ಗುರಿ ಇಟ್ಟು ಕೊಂಡಿದ್ದೀರೋ ಅದೇ ಪ್ರಕಾರ ಈ ಜನಕ್ಕೂ ಆದ್ಯತೆ ಕೊಡಬೇಕು. ಇವತ್ತು ನಮ್ಮ ಕಡೆ ಅರ್ಧ ಕಿ.ಮೀ. ದೂರದಲ್ಲಿ ಇರುವ ತಾಂಡಾಗಳಿಗೂ ವಿದ್ಯುತ್ ಕೊಟ್ಟಿಲ್ಲ. ಒಂದೆರಡು ಕಂಬಗಳನ್ನು ಹಾಕಿದರೂ ಸುಮಾರು ೨೦–೨೫ ತಾಂಡಾಗಳಿಗೆ ವಿದ್ಯುತ್ ಒದಗಿಸಬಹು ದಾಗಿದೆ. ಇಂತಹ ಸ್ವಲ್ಪ ಖರ್ಚಿನಲ್ಲಿ ಆಗುವ ಕಡೆ ಶೀಘ್ರ ಕೆಲಸ ಮಾಡುತ್ತೀರಾ ?

ಶ್ರೀ ಜೆ.ಹೆಚ್. ಪಟೀಲ್.—ಅಧ್ಯಕ್ಷರೇ, ಮಾನ್ಯ ಸದಸ್ಯರ ಕಳಕಳಿ ನನಗೆ ಅರ್ಥವಾಗುತ್ತದೆ. ೨–೩ ಕಂಬಗಳಿಂದ ವಿದ್ಯುತ್ ದೊರೆಯುವುದಾದರೆ ಅಂತಹ ತಾಂಡಗಳ ಕೆಲಸ ಬೇಗ ಮುಗಿಯುತ್ತವೆ. ಆದರೆ ಎಷ್ಟು ಸುಲಭವಾಗಿ ಹರಿಜನ ಕೇರಿಗಳಿಗೆ ವಿದ್ಯುತ್ ಒದಗಲಾಗುವುದೋ ಅಷ್ಟೇ ಸುಲಭದಲ್ಲಿ ಇವುಗಳಿಗೆ ಒದಗಿಸಲಾಗುವುದಿಲ್ಲ. ಕೆಲವು ಸಾರಿ ಇವು ಇಂಟೀರಿಯರ್‌ನಲ್ಲಿ ಇರುತ್ತವೆ. ತಾಂಡಾಗಳು ತಮ್ಮದೇ ಆದ ಇತಿಹಾಸದ ಹಿನ್ನೆಲೆಯನ್ನು ಹೊಂದಿವೆ. ಆ ಕಾರಣದಿಂದ ಹರಿಜನ ಕಾಲೋನಿಗಳಿಗೆ ಕೊಡುವ ಆದ್ಯತೆಯನ್ನೇ ಇವರಿಗೆ ಕೊಟ್ಟಿದ್ದು ಅದಕ್ಕಾಗಿ ಆರ್.ಇ.ಸಿ. ಯವರ ಮಂಜೂರಾತಿಯನ್ನು ಕಾಯುತ್ತಿದ್ದೇವೆ.

ಶ್ರೀ ಕೆ.ಬಿ. ಶಾಣಪ್ಪ.—ಆರ್.ಇ.ಸಿ. ಮಂಜೂರಾತಿ ಯಾವಾಗ ಸಿಗುತ್ತದೆ ? ಕಳೆದ ಸಲ ಇದೇ ಉತ್ತರ ಹೇಳಿದ್ದಾರೆ.

ಅಧ್ಯಕ್ಷರು.—೯ ತಾಂಡಾಗಳಿಗೆ ವಿದ್ಯುತ್ ಪೂರೈಸಲಾಗಿದೆಯೆಂದು ಹೇಳಿದ್ದಾರೆ. ಉಳಿದ ೪೦ ತಾಂಡಾಗಳಿಗೆ ವಿದ್ಯುತ್ ಪೂರೈಸಲು ಆರ್.ಇ.ಸಿ. ಆರ್ಥಿಕ ನೆರವಿನ ಮಂಜೂರಾತಿಯನ್ನು ಯಾವಾಗ ಪಡೆದುಕೊಳ್ಳುತ್ತೀರಿ ಎಂದು ಪ್ರಶ್ನೆ ಕೇಳಿ. ಆದಷ್ಟು ಬೇಗ ಮಾಡಲು ಕೇಂದ್ರ ಸರ್ಕಾರಕ್ಕೆ ಬರೆಯಿರಿ ಎಂದು ಪ್ರಶ್ನೆ ಕೇಳಿ.

ಶ್ರೀ ಕೆ.ಬಿ. ಶಾಣಪ್ಪ.—ಗೈಡೆನೇ ಇಸವಿಯಲ್ಲಿ ಇದೇ ಉತ್ತರವನ್ನು ಹೇಳಿದ್ದಾರೆ. ಆರ್.ಇ.ಸಿ. ಮಂಜೂರಾತಿಗಾಗಿ ಕೇಂದ್ರ ಸರ್ಕಾರದ ಮೇಲೆ ಒತ್ತಡ ಹಾಕುತ್ತೀರಾ ? ಈಗಾಗಲೇ ವಿದ್ಯುತ್ ಪೂರೈಸಿರತಕ್ಕ ೯ ತಾಂಡಾಗಳು ಯಾವುವು ?

ಶ್ರೀ ಜೆ.ಹೆಚ್. ಪಟೀಲ್.—ಆದಷ್ಟು ಬೇಗ ಮಂಜೂರಾತಿಯನ್ನು ತರಿಸುತ್ತೇನೆ.

ಶ್ರೀ ಕೆ.ಬಿ. ಶಾಣಪ್ಪ.—ಈಗಾಗಲೇ ನೀವು ವಿದ್ಯುತ್ ಪೂರೈಸಿರತಕ್ಕ ೯ ತಾಂಡಾಗಳು ಯಾವುವು?

ಶ್ರೀ ಜೆ.ಹೆಚ್. ಪಟೀಲ್.—ಆಮೇಲೆ ಉತ್ತರ ಕಳುಹಿಸಿಕೊಡುತ್ತೇನೆ.

ಆನೆಗಳ ಹತ್ಯೆ

೮೮ (೨೪೫) ಶ್ರೀಮತಿ ಮುಕ್ತರುನ್ನೀಸಾ (ನರಸಿಂಹರಾಜ).—ಮಾನ್ಯ ಅರಣ್ಯ ಗಣಿ ಹಾಗೂ ಭೂವಿಜ್ಞಾನ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

೧. ವಾಣಿಜ್ಯ ವ್ಯಾಪಾರದ ಉದ್ದೇಶಕ್ಕಾಗಿ ಅನಧಿಕೃತ ಪ್ರವೇಶಿಕರಿಂದ ದಂತಕ್ಕಾಗಿ ಆನೆಗಳ ಹತ್ಯೆ ಆಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆಯೇ:—

೨. ಅರಣ್ಯದಲ್ಲಿ ಸರಿಯಾದ ಪರ್ಯಾವೇಷಣೆಯನ್ನು ಒದಗಿಸದೇ ಇರುವುದಕ್ಕೆ ಕಾರಣವೇನು ?

೩. ಅಂತಹ ಪ್ರಕರಣಗಳ ವಿಚಾರದಲ್ಲಿ ನಿರ್ಧಾರಣ ಅಂಶದ ಬಗ್ಗೆ ಮಾಹಿತಿ ಮಾಡಲಾಗಿದೆಯೇ?

೪. ಅಂತಹ ಆನೆ ಹತ್ಯೆಯನ್ನು ತಡೆಗಟ್ಟಲು ಏನಾದರು ಕ್ರಮ ಕೈಗೊಳ್ಳಲಾಗಿದೆಯೇ ಮತ್ತು ತಪ್ಪಿತಸ್ಥ ಅಧಿಕಾರಿಗಳ ಮೇಲೆ ಏನಾದರು ಕ್ರಮ ತೆಗೆದುಕೊಳ್ಳಲಾಗಿದೆಯೇ ?

೫. ಇದರಿಂದ ಆನೆಹತ್ಯೆ ಮತ್ತು ದಂತದ ವ್ಯಾಪಾರಕ್ಕೆ ಸರಾಗವಾದ ಮಾರ್ಗವಿಲ್ಲೆ

ಶ್ರೀ ಜೆ.ಎಸ್. ದೇಶ್‌ಮುಖ್ (ಅರಣ್ಯ ಹಾಗೂ ಭೂವಿಜ್ಞಾನ ಮಂತ್ರಿಗಳು).—

೧. ಹೌದು.

೨. ನಮ್ಮ ರಾಜ್ಯದ ಗಡಿ ಪ್ರದೇಶದಲ್ಲಿ ಕೇರಳ ಮತ್ತು ತಮಿಳುನಾಡು ರಾಜ್ಯಕ್ಕೆ ಹೊಂದಿ ಕೊಂಡಂತೆ ಆನೆ ಹತ್ಯೆಯು ನಡೆಯುತ್ತಿದೆ. ಈ ಭಾಗದಲ್ಲಿ ಅರಣ್ಯ ಪಟ್ಟಿಯು ಸುಮಾರು ೫೦೦ ಕಿಲೋಮೀಟರ್ ಉದ್ದ ಹಾಗೂ ಸುಮಾರು ೪೦–೬೦ ಕಿ.ಮೀ. ಗಿಂತಲೂ ಹೆಚ್ಚು ವಿಸ್ತಾರವಾಗಿ ವಿಭಿನ್ನತೆಯಿಂದ ಕೂಡಿರುವುದರಿಂದ ಪರ್ಯವೇಕ್ಷಣೆಯನ್ನು ಸಂಪೂರ್ಣವಾಗಿ ಮಾಡುವುದು ಕಷ್ಟ ಸಾಧ್ಯ. ಇಲಾಖಾ ಸಿಬ್ಬಂದಿ ಹಾಗೂ ಗಡಿ ಪ್ರದೇಶದ ಆದಿವಾಸಿ ಜನರಿಂದ ಕೂಡಿದ ವಿಶೇಷ ಗಸ್ತು ತಂಡವನ್ನು ಗಡಿಪ್ರದೇಶದ ಅರಣ್ಯವನ್ನು ಗಸ್ತು ಮಾಡಲು ಇಲಾಖೆಯು ನೇಮಿಸಲಾಗಿದೆ. ಇದ ರೊಡನೆ ಸಿಬ್ಬಂದಿಗೆ ಆಯುಧಗಳನ್ನು ಮತ್ತು ಶೀಘ್ರ ಓಡಾಟಕ್ಕಾಗಿ ವಾಹನಗಳನ್ನು ಸಹ ಒದಗಿಸ ಲಾಗಿದೆ.

೩. ಪ್ರತಿಯೊಂದು ಆನೆಹತ್ಯೆ ಪ್ರಕರಣವನ್ನು ತಕ್ಷಣವೇ ಆರಕ್ಷಕ ಇಲಾಖಾ ಗಮನಕ್ಕೆ ಮುಂದಿನ ಕ್ರಮಕ್ಕಾಗಿ ಮಹಿಸಲಾಗುತ್ತಿದೆ.

೪. ಅಂಶ (೨)ರ ಎದುರು ತೋರಿಸಿರುವ ಕ್ರಮಗಳ ಜೊತೆಗೆ ಈ ಕೆಳಗಿನ ಕ್ರಮಗಳನ್ನು ಇಲಾಖೆಯು ತೆಗೆದುಕೊಂಡಿದೆ.

೧) ೧೩ ವಾಹನಗಳು, ೧೧೭ ಡಿ.ಬಿ.ಬಿ.ಎಲ್ ಬಂದೂಕುಗಳು, ೩೪ ಸ್ಥಿರ ಮತ್ತು ಸಂಚಾರಿ ನಿಸ್ತಂತು ಯಂತ್ರಗಳ ಸೆಟ್ಟುಗಳನ್ನು ಸಿಬ್ಬಂದಿಯ ೪೦ಗೆ ಆನೆಹತ್ಯೆಯನ್ನು ತಡೆಗಟ್ಟುವಲ್ಲಿ ದಕ್ಷತೆ ಹೆಚ್ಚಿಸಲು ಕಳೆದ ೩ ವರ್ಷಗಳಿಂದೀಚೆಗೆ ಕೊಂಡುಕೊಂಡು ಒದಗಿಸಲಾಗಿದೆ.

೨) ಆನೆಹತ್ಯೆಯನ್ನು ತಡೆಗಟ್ಟುವ ಉದ್ದೇಶದಿಂದಲೇ ಐವತ್ತು ೦.೩೦೫ ರೈಫಲ್ಲು ಗಳನ್ನು ಸರಬರಾಜು ಮಾಡಲು ಕೇಳಿಕೊಳ್ಳಲಾಗಿದೆ.

೩) ಕೇಂದ್ರದ ಸಹಾಯವನ್ನು ಒದಗಿಸಲು ಭಾರತ ಸರ್ಕಾರಕ್ಕೆ ೫ ವರ್ಷಗಳ ಅವಧಿಗೆ ಇರುವಂತೆ ೫೬ ಲಕ್ಷ ರೂಪಾಯಿ ಅನಾವರ್ತಕ ವೆಚ್ಚದ ಒಂದು ಯೋಜನೆಯನ್ನು ಸಲ್ಲಿಸಲಾಗಿದೆ. ಭಾರತ ಸರ್ಕಾರವು ಇದುವರೆಗೆ ಆಯುಧ ಸಾಮಗ್ರಿಗಳನ್ನು ಕೊಂಡುಕೊಳ್ಳಲು ೬ ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಿದೆ.

೪) ಸುಮಾರು ಐದುನೂರು ಆದಿವಾಸಿ ಜನರನ್ನು ಆನೆ ಹತ್ಯೆ ತಡ ವೀಕ್ಷಕರನ್ನಾಗಿ ಕ್ರಮಬದ್ಧವಾಗಿ ನೇಮಿಸಲಾಗಿದೆ.

೫) ೩ ರಾಜ್ಯಗಳ ಅರಣ್ಯ ಮತ್ತು ಆರಕ್ಷಕ ಅಧಿಕಾರಿಗಳ ಸಭೆಯನ್ನು ಆಗಾಗ್ಗೆ ಕರೆದು ಆನೆಹತ್ಯೆಯನ್ನು ತಡೆಯುವ ಬಗ್ಗೆ ಉಪಾಯ ಮತ್ತು ಕ್ರಮಗಳನ್ನು ಚರ್ಚಿಸಿ ಜಂಟಿ ಕ್ರಮಗಳನ್ನು ಸಲಹೆ ಮಾಡಿದೆ.

೬) ಆನೆಹತ್ಯೆ ಪ್ರಕರಣಗಳಲ್ಲಿ ಅರಣ್ಯ ಸಿಬ್ಬಂದಿಯವರು ಯಾರೂ ಪಾಲುಗೊಂಡಿಲ್ಲ.

೭) ಇದುವರೆವಿಗೂ ದಂತದ ವ್ಯಾಪಾರವು ನಿರ್ಬಂದವಿಲ್ಲದೆ ಸರಾಗವಾಗಿ ನಡೆಯುತ್ತಿತ್ತು.

(೫) ಇತ್ತೀಚೆಗೆ ದಿ: ೨೫–೧೧–೮೬ರಂದು ಭಾರತ ಸರ್ಕಾರವವರು ವನ್ಯಪ್ರಾಣಿ (ಸಂರಕ್ಷಣೆ) ಕಾನೂನಿಗೆ ಒಂದು ತಿದ್ದುಪಡಿಯನ್ನು ತಂದಿದ್ದು ಅದರಿಂದ ದಂತದ ವ್ಯಾಪಾರವನ್ನು ನಿರ್ಬಂಧದಲ್ಲಿಡಲಾಗಿದೆ. ಇದರಿಂದ ಆನೆಗಳ ಹತ್ಯೆಯ ಪ್ರಕರಣವು ಕಡಿಮೆಯಾಗುವ ಸಾಧ್ಯತೆ ಕೂಡ ಇದೆ.

SMT. MUKTHARUNNISA.—Sir, how many elephants have been killed so far and what is the value of tusk and who are all the culprits who are involved in the killings of elephants in the forests? It has been brought to my notice that when they remove the tusk the dead body of the elephant will remain their for a week or two and that no attempt have been made to remove the body resulting in bad smell. Why the officials are not taking any action not to remove the dead body? Elephants are the wealth of the Forest and what action is taken to prevent the killing of elephants?

ಅಧ್ಯಕ್ಷರು.—ತಾವು ಬೇಗ ಮುಗಿಸಬೇಕು.

ಶ್ರೀಮತಿ ಮುಕ್ತರುನ್ನೀಸಾ.—ಮಾನ್ಯ ಮಂತ್ರಿಗಳು ಬಹಳ ದೊಡ್ಡದಾದ ಉತ್ತರವನ್ನು ಕೊಟ್ಟಿದ್ದಾರೆ. ನಾನು ಸ್ವಲ್ಪ ಹೇಗೆ ಕೇಳಬೇಕು ?

ಶ್ರೀ ವೇದಾಂತ ಹೆಮ್ಮಿಗೆ.—ಶ್ರೀಮತಿ ಮುಕ್ತರುನ್ನೀಸಾರವರು ಬಾಡಿ, ಬಾಡಿಯೆಂದು ಹೇಳುತ್ತಿದ್ದಾರೆ ಅದು ಯಾವ ಬಾಡಿ ಎಂದು ಕೇಳುತ್ತಿದ್ದೇನೆ.

ಶ್ರೀಮತಿ ಮುಕ್ತರುನ್ನೀಸಾ.—ಎಲಿಫೆಂಟ್ ಬಾಡಿ ಎಂದು ನಾನು ಹೇಳಿದ್ದುದು. ಆಮೇಲೆ ಇನೇ ಪ್ರಶ್ನೆಗೆ ಕೊಟ್ಟಿರುವ ಉತ್ತರದಲ್ಲಿ ಮೂರು ರಾಜ್ಯಗಳ ಅರಣ್ಯ ಮತ್ತು ಆರಕ್ಷಕ ಅಧಿಕಾರಿಗಳ ಸಭೆಯನ್ನು ಆಗಾಗ್ಗೆ ಕರೆದು ಆನೆ ಹತ್ಯೆಯನ್ನು ತಡೆಯುವ ಬಗ್ಗೆ ಹೇಳಿದ್ದಿರಿ. ಈಗ ಒಟ್ಟು ಎಷ್ಟು ಆನೆಗಳನ್ನು ಕೊಲ್ಲಲಾಗಿದೆ ? ಈ ಕಮಿಟಿಯಲ್ಲಿ ಕರ್ನಾಟಕದವರು ಎಷ್ಟು ಮಂದಿ ಇದ್ದಾರೆ ?

ಶ್ರೀ ವೇದಾಂತ ಹೆಮ್ಮಿಗೆ.—ಮಾನ್ಯ ಅಧ್ಯಕ್ಷರೇ,

ಅಧ್ಯಕ್ಷರು.—ನೀವು ಕುಳಿತುಕೊಳ್ಳಿ.

ಶ್ರೀ ಜಿ.ಎಸ್. ದೇಶ್‌ಮುಖ್.—೧೯೮೦-೮೧ರಿಂದ ೧೯೮೬-೮೭ ರವರೆಗೆ ಒಟ್ಟು ೧೦೮ ಆನೆಗಳನ್ನು ಕೊಲ್ಲಲಾಗಿದೆ. ದಂತ ಕೆ.ಜಿ.ಗೆ ೧೮೦೦ ರಿಂದ ೨೦೦೦ ರೂಪಾಯಿಗಳವರೆಗೆ ಮಾರಲಾಗುತ್ತಿದೆ. ಆನೆಯ ದೇಹಗಳನ್ನು ಹಾಗೆಯೇ ಬಿಡುವುದಿಲ್ಲ ಸುಟ್ಟುಹಾಕುತ್ತಿದ್ದೇವೆ.

ಶ್ರೀ ಜಿ.ಎಂ. ಕಾನಡೆ.—ಮಾನ್ಯ ಅಧ್ಯಕ್ಷರೇ,

ಅಧ್ಯಕ್ಷರು.—ಇದರಲ್ಲಿ ಬೇರೆಯವರಿಗೆ ಅವಕಾಶ ಇಲ್ಲ.

ಶ್ರೀಮತಿ ಮುಕ್ತರುನ್ನೀಸಾ ಬೇಗಂ.—ಫಾರೆಸ್ಟ್ ಕಮಿಟಿಯಲ್ಲಿ ಕರ್ನಾಟಕದಿಂದ ಎಷ್ಟು ಜನ ಇದ್ದಾರೆ ?

ಶ್ರೀ ಜಿ.ಎಸ್. ದೇಶ್‌ಮುಖ್.—ಕೇರಳ, ತಮಿಳುನಾಡಿನಲ್ಲಿ ನಮ್ಮ ಹಿರಿಯ ಅಧಿಕಾರಿಗಳು ಹೋಗಿ ತನಿಖೆ ಮಾಡುತ್ತಾರೆ.

ಬೆಂಗಳೂರು ಮತ್ತು ಮೈಸೂರು ಜಿಲ್ಲೆಗಳಲ್ಲಿ ಆನೆಗಳ ಹಾವಳಿ

೮೯ (೨೬೩) ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್ (ಅಥಣಿ).—ಮಾನ್ಯ ಅರಣ್ಯ, ಗಣಿ ಮತ್ತು ಭೂವಿಜ್ಞಾನ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ ?

೧. ಬೆಂಗಳೂರು ಹಾಗೂ ಮೈಸೂರು ಜಿಲ್ಲೆಗಳಲ್ಲಿ ಕಾಡಾನೆಗಳು ಊರಿಗೆ ನುಗ್ಗಿ ಹಾವಳಿ ಮಾಡುವ ಪ್ರಕರಣಗಳು ಇತ್ತೀಚೆಗೆ ಆಗಾಗ್ಗೆ ಕಾಣಿಸುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

೨. ಇಂತಹ ಪ್ರಕರಣಗಳು ಆಗಾಗ್ಗೆ ಮರುಕಳಿಸದಂತಿರಲು ಸರ್ಕಾರದವರು ಕ್ರಮ ಕೈಗೊಳ್ಳುವರೇ ?

ಶ್ರೀ ಜಿ.ಎಸ್. ದೇಶ್‌ಮುಖ್ (ಅರಣ್ಯ, ಗಣಿ ಮತ್ತು ಭೂವಿಜ್ಞಾನ ಮಂತ್ರಿಗಳು).—

೧. ಹೌದು.

೨. ಕಾಡು ಆನೆಗಳನ್ನು ಅರಣ್ಯಕ್ಕೆ ಓಡಿಸಲು ಸ್ಥಳೀಯ ಹಾಗೂ ಇಲಾಖಾ ಸಿಬ್ಬಂದಿಯಂದರಿಂದ ಕೂಡಿದ ತಂಡಗಳನ್ನು ನೇಮಿಸಲಾಗಿದೆ. ಆನೆಗಳು ವ್ಯವಸಾಯ ಜಮೀನುಗಳಿಗೆ ಬಂದು ಹಾವಳಿ ಮಾಡದಿರುವಂತೆ ಆನೆ ತಡೆ ಕಂದಕಗಳನ್ನು ರಾಜ್ಯ ಅರಣ್ಯ ಗಡಿಗೆ ಹೊಂದಿಕೊಂಡಿರುವ ವ್ಯವಸಾಯ ಭೂಮಿ ಕಂಡುಬರುವ ಪ್ರದೇಶಗಳಲ್ಲಿ ತೋಡಿಸಲಾಗಿದೆ. ಇದಲ್ಲದೆ ಬೆಳೆ ನಷ್ಟಕ್ಕೆ ಸೂಕ್ತ ಪರಿಹಾರವನ್ನು ಮಂಜೂರು ಮಾಡಲಾಗುತ್ತಿದೆ.